# ಸ್ವಾಮಿ ಸದಾನಂದರು

ವಿ. ಮೀನಾ

**ಗುರುಭಕ್ತಿಯ ಮೂರ್ತರೂಪದಂತಿದ್ದ ಸ್ವಾಮಿ ಸದಾನಂದರ ಈ ಜೀವನ ವೃತ್ತಾಂತವು "ಸ್ವಾಮೀಜೀರ್ ಪದಪ್ರಾಂತೇ" ಎಂಬ ಬಂಗಾಳಿ ಗ್ರಂಥವನ್ನು ಆಧರಿಸಿದೆ. ಈ ಲೇಖನವನ್ನು ಸಿದ್ಧಪಡಿಸಿರುವ ಕುಮಾರಿ ಮೀನಾ ಅವರು ಬೆಂಗಳೂರು ರಾಮಕೃಷ್ಣ ಮಠದ ನಿಕಟ ಭಕ್ತರು.**

೧೮೮೮. ಪರಿವ್ರಾಜಕ ಸಂನ್ಯಾಸಿ ಸ್ವಾಮಿ ವಿವೇಕಾನಂದರು ಬೃಂದಾವನದಿಂದ ಹೃಷೀಕೇಶಕ್ಕೆ ತೆರಳುತ್ತಿದ್ದಾರೆ. ಆದರೆ ರೈಲಿನ ಟಿಕೆಟ್ಟು ಹಾತರಾಸಿನ ಪರ್ಯಂತ ಮಾತ್ರವಿದೆ. ಅಲ್ಲಿಯೇ ಇಳಿದರು. ಮುಂದೆ ಭಗವಂತ ಮಾಡಿದಂತಾಗಲಿ ಎಂದುಕೊಂಡು ಅತ್ಯಂತ ಸಾವಧಾನದಿಂದ ಒಂದು ಬೆಂಚಿನ ಮೇಲೆ ಕುಳಿತರು ದಣಿವಾರಿಸಿಕೊಳ್ಳಲು. ಅವರ ವದನಮಂಡಲ ವೈರಾಗ್ಯದಿಂದ, ತೇಜಸ್ಸಿನಿಂದ ತುಂಬಿದೆ. ಪರಮ ನಿಶ್ಚಿಂತರಾದ ಸ್ವಾಮಿಗಳ ಎರಡು ನಯನಗಳು ದಿವ್ಯಕಾಂತಿಯಿಂದ ಅರಳಿವೆ. ಕರ್ತವ್ಯವ್ರತರಾದ ಸ್ಟೇಷನ್ ಮಾಸ್ಟರ್ ಈ ದಿವ್ಯ ಸಂನ್ಯಾಸಿಯನ್ನು ಕಂಡು ಬೆರಗಾಗಿ ಹತ್ತಿರ ಬಂದು, ಎಲ್ಲಿಂದ ಬಂದಿರಿ, ಮುಂದೆ ಎಲ್ಲಿ ಹೋಗುವಿರಿ, ಮುಂತಾದ ಪ್ರಶ್ನೆಗಳನ್ನು ಕೇಳಿ ತುಸು ಸಂಕೋಚದಿಂದಲೇ, "ತಮ್ಮದು ಬಂಗಾಲೀ ಶರೀರವೇ?" ಎಂದರು. "ಹೌದು" ಎಂದು ಸ್ವಾಮಿಗಳು ಉತ್ತರಿಸಲು "ಹಾಗಾದರೆ ನನ್ನ ಮನೆಗೆ ಬನ್ನಿ. ನಾನೊರ್ವನೇ ಇದ್ದೇನೆ. ನೀವು ಹಸಿದಿರುವಂತೆ ಕಾಣುತ್ತದೆ. ಊಟ ಮಾಡುವಿರಂತೆ" ಎಂದರು. ಸ್ವಾಮಿಗಳೂ ಆನಂದದಿಂದ ಒಪ್ಪಿ ಆತನ ಮನೆಗೆ ತೆರಳಿದರು. ಸ್ವಾಮಿಗಳ ಈ ಸರಳ ವರ್ತನೆ ಸ್ಟೇಷನ್ ಮಾಸ್ಟರನ್ನು ಮತ್ತಷ್ಟು ಮುಗ್ಧನಾಗುವಂತೆ ಮಾಡಿತು. ಮನೆಗೆ ಬಂದಕೂಡಲೇ ಸ್ವಾಮಿಗಳು ಸ್ಟೇಷನ್ ಮಾಸ್ಟರನ್ನು ಪ್ರಶ್ನಿಸಿದರು: "ನೀನು ಅತಿಥಿಗೆ ಏನನ್ನು ಕೊಟ್ಟು ಉಪಚಾರ ಮಾಡುವೆ?" ಆಗ ಆತ ಒಂದು ಫಾರಸಿ ಕವಿತೆಯೊಂದನ್ನು ಹೇಳುತ್ತಾ "ಪ್ರಿಯತಮ, ನೀನು ನನ್ನ ಮನೆಗೆ ಬಂದಿರುವೆ. ನಾನು ನನ್ನ ಎದೆಯ ರಕ್ತದಿಂದ ಆಹಾರ ತಯಾರಿಸಿ ಕೊಡುವೆ" ಎಂದರು. ಅರ್ಥಾತ್ ನನ್ನ ಹೃದಯವನ್ನೇ ನಿನಗರ್ಪಿಸುವೆ ಎಂದರು. ಸ್ವಾಮಿ ವಿವೇಕಾನಂದರನ್ನು ಸ್ವಾಗತಿಸಿ ಮನೆಯಲ್ಲಿ ಆತಿಥ್ಯೋಪಚಾರಗಳನ್ನು ನೀಡಿದ ಈ ಪುಣ್ಯಪುರುಷನೇ ಅವರ ಮೊದಲ ಶಿಷ್ಯರಾದ ಸ್ವಾಮಿ ಸದಾನಂದರು. ಇವರೇ ಸ್ವಾಮೀಜಿಯ ಮೊದಲ ಶಿಷ್ಯರು.

೧೮೬೫ರಲ್ಲಿ ಕಲ್ಕತ್ತೆಯ ಗಡವಾರ ಹಳ್ಳಿಯಲ್ಲಿ ಶರತ್‌ಚಂದ್ರರ ಜನ್ಮ. ಅವರ ತಂದೆ ಕಾಶಿಯಲ್ಲಿ ನೆಲೆಸಿದ ಕಾರಣ ಬಂಗಾಲಿಯಾದರೂ ಶರತ್‌ಚಂದ್ರರಿಗೆ ಹಿಂದೀ, ಉರ್ದು ಭಾಷೆಗಳ ಪರಿಚಯವೂ ಚೆನ್ನಾಗಿತ್ತು. ಅವರ ದೊಡ್ಡಣ್ಣನಾದ ಅಧರಚಂದ್ರ ಗುಪ್ತರು ಗೃಹತ್ಯಾಗ ಮಾಡಿ ಸಂನ್ಯಾಸಿಯಾಗಿದ್ದರು. ಬಹು ಜನರು ಆತನನ್ನು ಸಿದ್ಧ ಪುರುಷನೆಂದು ಭಕ್ತಿ ಶ್ರದ್ಧೆಗಳನ್ನು ತೋರುತ್ತಿದ್ದರು. ಶರತ್‌ಚಂದ್ರರು ವೈರಾಗ್ಯವನ್ನು ಹೊಂದಲು ಮುಖ್ಯವಾಗಿ ಅವರ ಅಗ್ರಜರ ಜೀವನವೇ ಸ್ಫೂರ್ತಿ ನೀಡಿತ್ತೆನ್ನಬಹುದು. ಶರತ್‌ಚಂದ್ರರದು ಬಲಿಷ್ಠ ದೇಹ, ದೃಢ ಚಾರಿತ್ರ್ಯ. ಅವಿವಾಹಿತರಾದ ಅವರು ಬಹು ಆನಂದದ ವ್ಯಕ್ತಿಯಾಗಿದ್ದರು. ಸರಳ, ಉದಾರ, ನಿಷ್ಕಪಟ ಸ್ವಭಾವದಿಂದ ಎಲ್ಲರಿಗೂ ಅತ್ಯಂತ ಪ್ರಿಯರಾಗಿದ್ದರು. ಅತ್ಯಂತ ಕರ್ಮನಿಷ್ಠರಾದ ಶರತ್‌ಚಂದ್ರರು ಪ್ರತಿದಿನ ಅನೇಕ ಜನರನ್ನು ನೋಡುತ್ತಿದ್ದರೂ ಯಾರಿಂದಲೂ ಆಕರ್ಷಿತರಾಗಿರಲಿಲ್ಲ. ಆದರೆ ಈ ದಿನ ಪೌರುಷವೇ ಮೂರ್ತಿವೆತ್ತಂತಿದ್ದ ವ್ಯಕ್ತಿಗೆ ಮರುಳಾಗಿ ತಮ್ಮ ಕರ್ತವ್ಯವನ್ನು ಮರೆತು ಅವರೆಡೆಗೆ ಸೆಳೆಯಲ್ಪಟ್ಟರು.

ಸ್ವಾಮಿ ವಿವೇಕಾನಂದರ ವಿಶ್ವವನ್ನೇ ಗೆಲ್ಲುವ ಅಲೌಕಿಕ ಪ್ರಭೆಯನ್ನು ಕಂಡು ವಿಸ್ಮಿತರಾದ ಶರತ್‌ಚಂದ್ರರು, ತಾವೇ ನೀರನ್ನು ತಂದು ಅವರಿಗೆ ಸ್ನಾನ ಮಾಡಿಸಿ, ಅಡುಗೆಯನ್ನು ಮಾಡಿ ಊಣಬಡಿಸಿದರು. ಅವರ ವಿಶ್ರಾಂತಿಗಾಗಿ ಎಲ್ಲ ಏರ್ಪಾಡುಗಳನ್ನೂ ಮಾಡಿದರು. ಅವರ ಆದರದ ಸೇವೆಯಿಂದ ಸ್ವಾಮಿ ವಿವೇಕಾನಂದರು ಪ್ರಸನ್ನರಾದರು. ಅವರೀರ್ವರ ಪರಸ್ಪರ ಪ್ರೀತಿ ಅತ್ಯಂತ ಗಾಢವಾಯಿತು. ಶರತ್‌ಚಂದ್ರರಿಗೆ ಸಂಸಾರದಲ್ಲಿ ಸ್ವಾಮೀಜಿಯೇ ತನ್ನ ಏಕೈಕ ಸ್ವಂತ ಜನ ಎಂಬ ಭಾವನೆಯುಂಟಾಯಿತು. ಶರತ್‌ಚಂದ್ರರಿಗೆ ತಂದೆ, ತಾಯಿ, ತಂಗಿ, ತಮ್ಮಂದಿರು ಇದ್ದರೂ ಇವರೆ ಪ್ರಾಣಪ್ರಿಯರಾಗಿ ಕಂಡರು. ಒಂದು ದಿನ ಅವರು ಸ್ವಾಮಿಗಳನ್ನು ಕೇಳಿದರು, "ನನ್ನ ಕಥೆ ಏನಾಗುವುದು? ನನ್ನನ್ನು ನಿಮ್ಮೊಡನೆ ಕರೆದುಕೊಂಡು ಹೋಗಿರಿ" ಎಂದು. ಸ್ವಾಮಿಗಳೂ ಸಹ, "ನನ್ನೊಡನೆ ಬರುವಂತಿದ್ದರೆ ಸರ್ವಸಂಗ ಪರಿತ್ಯಾಗ ಮಾಡಬೇಕು" ಎನಲು ಶರತ್‌ಚಂದ್ರರು ಅದಕ್ಕೆ ಸಮ್ಮತಿಸಿದರು. ಸ್ವಾಮಿ ವಿವೇಕಾನಂದರು ತಾವು ಭಾರತದಲ್ಲಿ ಧರ್ಮವನ್ನು ಪುನಃ ಜಾಗರಣ ಮಾಡುವ ಸಂಕಲ್ಪವನ್ನು ತೊಟ್ಟಿರುವೆನೆನಲು ಅದಕ್ಕೆ ನಾನು ನನ್ನ ಕೈಲಾದ ಸಹಾಯ ಮಾಡುವೆ ಎಂದರು ಶರತ್‌ಚಂದ್ರರು.

ಸ್ವಾಮೀಜಿ ಕೇಳಿದರು: "ನೀನು ಭಿಕ್ಷಾಪಾತ್ರೆಯನ್ನು ಹಿಡಿದು ಮನೆಮನೆಗೂ ಹೋಗಿ ಭಿಕ್ಷೆ ಬೇಡಬಲ್ಲೆಯಾ?" "ನನಗೆ ಅಪ್ಪಣೆ ಕೊಡಿ"—ತತ್‌ಕ್ಷಣ ಪ್ರತಿಸ್ಪಂದಿಸಿದರು ಶರತ್‌ಚಂದ್ರರು. ಅವರ ಅನುಮತಿಯನ್ನು ಪಡೆದು ಶರತ್‌ಚಂದ್ರರು ಕೂಡಲೇ ಭಿಕ್ಷಾಪಾತ್ರೆಯನ್ನು ಹಿಡಿದು ರೈಲ್ವೇ ಕಾಲೋನಿಯಲ್ಲಿ ಭಿಕ್ಷೆ ಬೇಡಿಕೊಂಡು ಬಂದರು. ಅವರ ವಿಧೇಯತೆ, ನಿರಭಿಮಾನವನ್ನು ಕಂಡು ಸ್ವಾಮೀಜಿ ಸಂತುಷ್ಟರಾದರು.

ಹಿಮಾಲಯದ ಕಡೆಗೆ ಹೊರಟ ಸ್ವಾಮಿ ವಿವೇಕಾನಂದರನ್ನು ಶರತ್‌ಚಂದ್ರ ಗುಪ್ತರೂ ಅನುಸರಿಸಿದರು. ಅವರಿಗೆ ಉಪದೇಶವಿತ್ತು, ಸ್ವಾಮಿ ಸದಾನಂದ ಎಂಬ ಹೆಸರನ್ನು ಅವರಿಗೆ ನೀಡಿ ಸ್ವಾಮೀಜಿ ಹೇಳಿದರು, "ನೋಡು, ಸರ್ವಭೂತಗಳಲ್ಲೂ ಭಗವಂತ

ನಿದ್ವಾನ್. ಕೇವಲ ಶಿಷ್ಯನಾಗಿ ಬಿಟ್ಟರೆ ತತ್ತ್ವವೆಲ್ಲಾ ಕರಗತವಾಗಿ ಬಿಡುವುದಿಲ್ಲ." ಇಬ್ಬರೂ ಹೃಷೀಕೇಶದ ಕಡೆಗೆ ಹೊರಟರು. ಸರಳ, ನಿಷ್ಕಪಟ ಶಿಷ್ಯನ ಸಹವಾಸದಿಂದ ಸ್ವಾಮೀಜಿಯವರೂ ಆನಂದಿತರಾದರು. ಆದರೆ ಪರಿವ್ರಾಜಕ ಸಂನ್ಯಾಸಿಯ ಕಷ್ಟಕರ ಜೀವನಕ್ಕೆ ಒಗ್ಗಿರದ ಸದಾನಂದರು ನಾನಾ ಕಷ್ಟಗಳಿಗೆ ಗುರಿಯಾದರು. ಕಾಲುನಡಿಗೆಯಲ್ಲಿ ಹೆಚ್ಚು ನಡೆಯಲು ಸಾಧ್ಯವಾಗಲಿಲ್ಲ. ತಮ್ಮ ಕಾಲಿನ ಜೋಡುಗಳನ್ನು ಕಳಚಿ ತಮ್ಮ ಬಟ್ಟೆಯ ಮೂಟೆಯಲ್ಲಿ ಇಟ್ಟರು—ಸಲೀಸಾಗಿ ನಡೆಯಲು ಸಾಧ್ಯವೆಂದು! ಆದರೆ ಆ ದುರ್ಗಮ ದಾರಿಗಳಲ್ಲಿ ನಡೆಯುವುದು ಬಹು ಕಷ್ಟವೇ ಆಯಿತು. ಕೊನೆಗೆ ಆ ಮೂಟೆಯನ್ನು ತಲೆಯ ಮೇಲೆ ಹೊತ್ತರು. ಆದರೂ ನಡೆಯುವುದು ಕಷ್ಟವಾಯಿತು. ಶಿಷ್ಯನ ಈ ಕಷ್ಟದ ಸ್ಥಿತಿಯನ್ನು ಕಂಡು ಸ್ವಾಮಿ ವಿವೇಕಾನಂದರು ಆತನ ಮೂಟೆಯನ್ನು ತಾವು ತಲೆಯ ಮೇಲೆ ಹೊತ್ತು, ಆತನ ಕೈಯನ್ನು ಹಿಡಿದುಕೊಂಡು ನಡೆಯಲಾರಂಭಿಸಿದರು. ಮುಂದೆ ಸದಾನಂದರು ಈ ಘಟನೆಯನ್ನು ಸ್ಮರಿಸಿ ಕಣ್ಣೀರಿಡುತ್ತಾ ಹೇಳುತ್ತಿದ್ದರು, "ಆಹಾ! ಅವರು ಸುಮ್ಮನೆ ನನ್ನ ಗುರುವಾದರೆ? ನಾನು ಹಾಕಿಕೊಂಡ ಚಪ್ಪಲಿಯನ್ನು ಸಹ ತಲೆಯಮೇಲೆ ಹೊತ್ತು ನಡೆದರು" ಎಂದು. "ನಾನು ಅವರ ಮಾತನ್ನು ಕೇಳುವುದರಲ್ಲಿ ಎಷ್ಟು ತನ್ಮಯನಾಗಿದ್ದೆ ಎಂದರೆ ಅವರು ನನ್ನ ಚಪ್ಪಲಿಯನ್ನು ಹೊತ್ತಿದ್ದಾರೆಂಬ ಅರಿವೂ ನನಗಿರಲಿಲ್ಲ" ಎಂದು ಹೇಳುತ್ತಿದ್ದರು. ಅನೇಕ ವೇಳೆಯಲ್ಲಿ ಮೃತ್ಯುವೇ ಎದುರಾದಾಗಲೂ ಸ್ವಾಮೀಜಿ ಸದಾನಂದರನ್ನು ರಕ್ಷಿಸಿ ಜೊತೆಯಲ್ಲಿ ಕರೆದೊಯ್ದರು. ಅದರ ಬಗ್ಗೆ ಮಾತನಾಡುತ್ತ ಸದಾನಂದರು ಹೇಳುತ್ತಿದ್ದರು, "ಆಹಾ! ಅವರು ಜೊತೆಯಲ್ಲಿ ಇದ್ದರೆ ಎಂತಹ ಸಾಹಸ, ಭರವಸೆ ನಮ್ಮ ಹೃದಯವನ್ನು ತುಂಬುತ್ತಿತ್ತು! ಆಗ ಮೃತ್ಯುವೂ ಸಹ ತುಚ್ಛವೆಂಬ ಭಾವನೆ ಬರುತ್ತಿತ್ತು! ಅವರು ಸಾಕ್ಷಾತ್ ಪ್ರೇಮಾವತಾರರೇ ಆಗಿದ್ದರು!"

ಹೃಷೀಕೇಶದಲ್ಲಿ ಸ್ವಾಮಿ ವಿವೇಕಾನಂದರು ಶಿಷ್ಯ ಸದಾನಂದರೊಂದಿಗೆ ಆನಂದದಿಂದ ಸಾಧನೆಯಲ್ಲಿ ತನ್ಮಯರಾದರು. ಆದರೆ ಕೇದಾರ ಬದರಿಗೆ ಹೋಗುವ ಆಸೆ ಸ್ವಾಮಿಗಳಿಗೆ. ಸದಾನಂದರ ಆರೋಗ್ಯ ಚೆನ್ನಾಗಿಲ್ಲದ್ದರಿಂದ ಸುಮ್ಮನಾದರು. ಒಂದು ದಿನ ಸ್ವಾಮೀಜಿ ಒಬ್ಬರೇ ತಮ್ಮ ಇಷ್ಟಬಂದ ಹಾಗೆ ಹೋಗುವುದಾಗಿ ನಿಶ್ಚಯಿಸಿ ಸದಾನಂದರಿಗೆ, "ನೋಡು, ನಾನು ಸ್ವತಂತ್ರನಾಗಿದ್ದೆ. ನೀನು ನನ್ನ ಕಾಲಿನ ಬಂಧನವಾಗಿರುವೆ. ಇನ್ನು ಮುಂದೆ ಇದು ಸಾಧ್ಯವಿಲ್ಲ" ಎಂದು ಹೇಳಿ ಕಂಬಳಿ ಹೆಗಲಮೇಲೆ ಹೊತ್ತು ದಂಡ ಕಮಂಡಲಗಳೊಂದಿಗೆ ಹೊರಟೇ ಹೋದರು. ಸ್ವಾಮೀಜಿಯವರಿಗೆ ಅಡುಗೆ ಮಾಡುತ್ತಿದ್ದ ಸದಾನಂದರು ಏನೂ ಮಾಡಲು ತೋಚದೆ ಅಲ್ಲೇ ಕುಳಿತುಬಿಟ್ಟರು. ೩-೪ ಗಂಟೆಗಳ ಕಾಲ ಹತಾಶೆಯಿಂದ, ಅಭಿಮಾನದಿಂದ, ವೇದನೆಯಿಂದ ಸದಾನಂದರು ಅಲ್ಲೇ ಕುಳಿತಿದ್ದರು. ಎಲ್ಲಿಂದಲೊ ಮತ್ತೆ ವಾಪಸ್ಸಾದ ಸ್ವಾಮಿಗಳು, "ಏನಪ್ಪಾ, ಏನಾದರೂ ಊಟವಿದೆಯೇ, ಹಸಿವಾಗುತ್ತಿದೆ" ಎಂದರು. ಆನಂದಿತರಾಗಿ ಸದಾನಂದರು ಅವರಿಗೆ ಊಟ ಬಡಿಸಲು, "ನೀನೇಕೆ ತಿನ್ನಲಿಲ್ಲ?" ಎಂದು ಸ್ವಾಮಿಗಳು ಕೇಳಿದರು. "ನೀವು ಇಲ್ಲದೆ ನಾ ಹೇಗೆ ತಿನ್ನಲಿ" ಎಂದರು. ಆಗ ಸ್ವಾಮಿಗಳು "ನೋಡು, ನೀನು ನಿಜವಾಗಲೂ ನನಗೆ ದೊಡ್ಡ ಬಂಧನವಾಗಿರುವೆ. ನಾನು ಹೊರಟುಹೋಗುವುದರಲ್ಲಿದ್ದೆ. ಆದರೆ ನಿನಗೆ ಈ ರೀತಿಯ ಜೀವನ ಹೊಸದಾದುದರಿಂದ ನಿನಗೆಂಥ ಕಷ್ಟವಾಗುವುದೊ ಎಂದು ಭಾವಿಸಿ ಮತ್ತೆ ಮರಳಿ ಬಂದೆ" ಎಂದರು.

೧೮೮೮ರ ಕೊನೆಯಲ್ಲಿ ಸ್ವಾಮಿ ವಿವೇಕಾನಂದರು ಮಠಕ್ಕೆ ಬಂದರು. ಹಾತರಾಸಿನಲ್ಲಿ ಆರೋಗ್ಯವನ್ನು ಸುಧಾರಿಸಿಕೊಳ್ಳುತ್ತಿದ್ದ ಸದಾನಂದರಿಗೆ ಮಠಕ್ಕೆ ಬರಲು ಹೇಳಿದರು. ಅಂತೆಯೇ ಅನತಿ ಕಾಲದಲ್ಲಿ ಸದಾನಂದರು ಮಠಕ್ಕೆ ಹಿಂತಿರುಗಿದರು. ಮಠದಲ್ಲಿ ಸದಾ ಆನಂದಿತರಾಗಿ ಇದ್ದ ಸದಾನಂದರಿಗೆ ಸ್ವಾಮಿ ಶಾರದಾನಂದರು ಅತ್ಯಂತ ಸಹಾನುಭೂತಿಯನ್ನು ತೋರಿ ಮಠದ ಜೀವನಕ್ಕೆ ಅವರು ಹೊಂದಿಕೊಳ್ಳುವಂತೆ ಮಾಡಿದರು. ಸದಾನಂದರೇ ಮಠದಲ್ಲಿ ಸಾಧುಗಳನ್ನೆಲ್ಲಾ "ಮಹಾರಾಜ್" ಎಂದು ಸಂಬೋಧನೆ ಮಾಡಲು ಪ್ರಾರಂಭ ಮಾಡಿದುದು. ಅಂದಿನ ದಿನಗಳನ್ನು ಸ್ಮರಿಸುತ್ತಾ ಸದಾನಂದರು ಹೇಳುತ್ತಿದ್ದರು: "ಆಗ ನಮಗೆಲ್ಲ ಸ್ವಲ್ಪವೂ ಬಿಡುವಿರುತ್ತಿರಲಿಲ್ಲ. ಯಾರಾದರೂ ಪಂಡಿತರು ಬಂದು ಚರ್ಚೆ ನಡೆಸುತ್ತಿದ್ದರು. ಸಮಯ ದೊರೆತರೆ 'ಹರಿಬೋಲ್' ಎಂದು ಕೀರ್ತನೆ ಪ್ರಾರಂಭ. ಮಠದ ಸೇವೆ, ಬಂದು ಹೋಗುವವರನ್ನು ನೋಡಿಕೊಳ್ಳುವುದು ಇತ್ಯಾದಿ ನಿರಂತರ ಕೆಲಸವಿರುತ್ತಿತ್ತು. ಸ್ವಾಮಿ ವಿವೇಕಾನಂದರು ಪ್ರಾತಃಕಾಲದಲ್ಲಿಯೇ ಎದ್ದು ಗಾನವನ್ನು ಆರಂಭಿಸುತ್ತಿದ್ದರು, 'ಏಳಿರಿ, ಏಳಿರಿ, ಅಮೃತ ಧಾಮದ ಅಧಿಕಾರಿಗಳೇ' ಎಂದು. ಅನಂತರ ಎಲ್ಲರೂ ಎದ್ದು ಧ್ಯಾನದಲ್ಲಿ ನಿರತರಾಗುತ್ತಿದ್ದರು. ಅನಂತರ ಭಜನೆ, ಪಾಠ, ಶಾಸ್ತ್ರವಿಚಾರಗಳಲ್ಲಿ ಎಲ್ಲರೂ ಮುಳುಗಿಹೋಗುತ್ತಿದ್ದರು. ಒಂದು ಅಥವಾ ಎರಡು ಗಂಟೆಯ ಸಮಯಕ್ಕೆ ರಾಮಕೃಷ್ಣಾನಂದರು ಎಲ್ಲರನ್ನೂ ಊಟಕ್ಕೆ ಎಬ್ಬಿಸುತ್ತಿದ್ದರು. ಮತ್ತೆ ಸಂಜೆಯತನಕ ಶಾಸ್ತ್ರಚರ್ಚೆ ಭಜನೆ, ಧ್ಯಾನ ಇತ್ಯಾದಿಗಳಲ್ಲಿ ಕಳೆದು ಸಂಜೆ ಆರಾತ್ರಿಕಕ್ಕೆ ಅಣಿಯಾಗುತ್ತಿದ್ದೆವು. ಅದಾದ ನಂತರ ಶ್ರೀರಾಮಕೃಷ್ಣರ ವಿಷಯವಾಗಿ ಮಾತುಕತೆ ಮತ್ತೆ ಧ್ಯಾನ ಮಾಡುವುದು. ಕೆಲವು ವೇಳೆ ನಡುರಾತ್ರಿಯ ತನಕ 'ಸೀತಾರಾಮ್' ಎಂಬ ನಾಮಸಂಕೀರ್ತನೆ ನಡೆಯುತ್ತಿತ್ತು." ವರಾಹನಗರ ಮಠದ ತಪಸ್ಸಿನ ಬಗ್ಗೆ ಮಾತನಾಡುತ್ತಾ, ಮುಂದಿನ ದಿನಗಳಲ್ಲಿ ಸದಾನಂದರು ಹೇಳುತ್ತಿದ್ದರು : "ನಾವೇನು ಕೇವಲ ಸಾಧುಗಳೇ? ನಾವೆಲ್ಲ ಋಷಿಗಳ ದಳಕ್ಕೆ ಸೇರಿದವರು."

ಆಗ ಅನಾರೋಗ್ಯದಿಂದ ನರಳುತ್ತಿದ್ದ ಭಕ್ತ ಬಲರಾಮ ಬೋಸ್‌ರ ಸೇವೆಯನ್ನೂ ಮಾಡಿದರು ಸದಾನಂದರು. ಎಲ್ಲರಿಗೂ ದಾಸನಾಗಿ ಸೇವೆ ಮಾಡು ಎಂದು ವಿವೇಕಾನಂದರು ಸದಾನಂದರಿಗೆ ಹೇಳಿದ್ದರು. ೧೮೯೦ರಲ್ಲಿ ಸ್ವಾಮೀಜಿಯವರು ಕಾಶಿಯಲ್ಲಿ ವಾಸವಾಗಿದ್ದಾಗ ಸ್ವಾಮಿ ಸದಾನಂದರೂ ಅವರೊಡನೆ ನೆಲೆಸಿದ್ದರು. ಕಾಶಿಯಲ್ಲಿ ಸ್ವಾಮಿ ವಿವೇಕಾನಂದರು ಅತ್ಯಂತ ಉಚ್ಚತಮ

ಆಧ್ಯಾತ್ಮಿಕ ಭಾವಸಂಪನ್ನರಾಗಿದ್ದರೆಂದು ಸದಾನಂದರು ಹೇಳುತ್ತಿದ್ದರು. "ಅವರ ಬಳಿ ಹೋಗುವುದಕ್ಕೂ ಸಂಕೋಚವಾಗುತ್ತಿತ್ತು. ಒಂದು ದಿವ್ಯಜ್ಯೋತಿಯಿಂದ ಆವೃತರಾದಂತೆ ಇತ್ತು" ಎಂದು ಅವರು ಹೇಳುತ್ತಾರೆ. ಕಾಶಿಯಲ್ಲಿ ಅಸ್ವಸ್ಥರಾದ ಅಭೇದಾನಂದರ ಸೇವೆಯನ್ನೂ ಸದಾನಂದರು ಭಕ್ತಿಪೂರ್ವಕವಾಗಿ ಮಾಡಿದರು. ನಂತರ ಅಭೇದಾನಂದರೊಡನೆ ಸ್ವಲ್ಪ ಕಾಲ ತಪಸ್ಸಿನಲ್ಲಿ ನಿರತರಾದರು. ಆಗ ಸದಾನಂದರಿಗೆ ನಿಯಮಿತವಾಗಿ ವೇದಾಂತ ಪಾಠಗಳನ್ನು ಅಭೇದಾನಂದರು ಹೇಳಿಕೊಡುತ್ತಿದ್ದರು. ಭಗವಂತನ ಕೃಪೆಯ ಮೇಲೆ ನಿರ್ಭರರಾಗಿ ತಪಸ್ಸನ್ನಾಚರಿಸುತ್ತಿದ್ದ ಅವರಿಗೆ ಹಲವು ಬಾರಿ ಎಲ್ಲಿಂದಲೋ ಹೇಗೋ ಬೇಕಾದ ಸಹಾಯಗಳೆಲ್ಲ ಒದಗಿ ಬರುತ್ತಿದ್ದವು. ೧೮೯೧ರಲ್ಲಿ ಮಠ ಆಲಂಬಜಾರಕ್ಕೆ ವರ್ಗಾವಣೆಯಾಗಲು ಸದಾನಂದರು ರಾಮಕೃಷ್ಣಾನಂದರು, ಪ್ರೇಮಾನಂದರಿಗೆ ಸಹಾಯಕರಾಗಿ ಮಠದ ಸೇವಾಕಾರ್ಯದಲ್ಲಿ ತತ್ಪರರಾದರು. ಮಠದಲ್ಲಿ ಎಲ್ಲರಿಗೂ ಪ್ರಿಯರಾಗಿದ್ದರು ಸದಾನಂದರು—ಅದಕ್ಕೆ ಕಾರಣ ಅವರ ಪ್ರೇಮಮಯ ಆಚರಣೆ, ಬಾಲಕನಂತಹ ಸ್ವಭಾವ, ಹಾಗೂ ಸೇವಾಪರಾಯಣತೆ.

ವಿದೇಶದ ನಾನಾ ಕಡೆಗಳಲ್ಲಿ ಸಂಚರಿಸುತ್ತಿದ್ದ ವಿವೇಕಾನಂದರು ಪತ್ರಗಳಲ್ಲಿ ಸದಾನಂದರನ್ನು ಯಾವಾಗಲೂ ವಿಚಾರಿಸಿಕೊಳ್ಳುತ್ತಿದ್ದರು. "ನಿಮ್ಮೆಲ್ಲರಲ್ಲೂ ಒಂದೊಂದು ಮಹಾಶಕ್ತಿ ಇದೆ" ಎಂದು ವಿವೇಕಾನಂದರು ಬರೆಯುತ್ತಿದ್ದರು. ೧೮೯೭ರಲ್ಲಿ ತಮ್ಮ ದೇಶಕ್ಕೆ ಹಿಂತಿರುಗಿದರು ಸ್ವಾಮಿ ವಿವೇಕಾನಂದರು. ಕೊಲಂಬೋ ಇಂದ ಆಲ್ಮೋರದ ತನಕ ಸ್ವಾಗತಗಳನ್ನು ಸ್ವೀಕರಿಸುತ್ತ, ಅಭಿನಂದನಾ ಪತ್ರಗಳನ್ನು ಪಡೆಯುತ್ತ, ಭಾರತಕ್ಕೆ ಮರಳಿದ ತಮ್ಮ ಶ್ರೀಗುರುವನ್ನು ದರ್ಶಿಸಲು ಸದಾನಂದರು ಮದ್ರಾಸಿಗೆ ಹೋಗಿದ್ದರು. ಸಹಸ್ರಾರು ಜನರ ಮಧ್ಯದಲ್ಲಿ ಸದಾನಂದರನ್ನು ಗುರುತಿಸಿ ಸ್ವಾಮಿ ವಿವೇಕಾನಂದರು ಅವರನ್ನು ಕರೆದು ತಮ್ಮ ಗಾಡಿಯಲ್ಲೇ ಪಕ್ಕದಲ್ಲಿ ಕುಳ್ಳಿರಿಸಿಕೊಂಡರು. ಅದನ್ನೆಲ್ಲ ಸ್ಮರಿಸಿಕೊಳ್ಳುತ್ತ ಮುಂದೆ ಸದಾನಂದರ ಕಣ್ಣು ಹನಿಗೂಡುತ್ತಿತ್ತು. ೧೮೯೭ರಲ್ಲಿ ಮದ್ರಾಸಿನಲ್ಲಿ ರಾಮಕೃಷ್ಣ ಮಠ ಪ್ರಾರಂಭವಾಗಲು, ರಾಮಕೃಷ್ಣಾನಂದರೊಂದಿಗೆ ಅವರಿಗೆ ಸಹಾಯಕರಾಗಿ ಸ್ವಾಮಿ ಸದಾನಂದರೂ ಮದ್ರಾಸಿಗೆ ಬಂದರು.

ಪಾಶ್ಚಾತ್ಯ ಮಹಿಳೆಯಾಗಿದ್ದ ಸೋದರಿ ನಿವೇದಿತಾ ಅವರನ್ನು ನೋಡಿಕೊಳ್ಳುವ ಭಾರವನ್ನು ವಿವೇಕಾನಂದರು ಸದಾನಂದರಿಗೇ ಒಪ್ಪಿಸಿದರು. ಸದಾನಂದರಿಂದಲೇ ನಿವೇದಿತಾ ತಮ್ಮ ಶ್ರೀಗುರುವಿನ ಬಗ್ಗೆ ಎಷ್ಟೋ ವಿಚಾರಗಳನ್ನು ಅರಿತರು. ಸ್ವಾಮಿ ಯೋಗಾನಂದರ ಮೃತ್ಯುಕಾಲದಲ್ಲೂ ಸದಾನಂದರು ಅವರ ಬಳಿಯಿದ್ದರು. ಅವರ ದೇಹವನ್ನು ಚಿತಾಹುತಿಗೆ ಕರೆದೊಯ್ದು ಮಲಗಿಸಿ ಬೆಂಕಿಯನ್ನಿಟ್ಟಾಗ, "ಯೋಗಾನಂದರು ಬೆಂಕಿಯ ನಡುವೆ ಮಲಗಿದ ಸದಾಶಿವನಂತೆ ಕಂಡರು" ಎಂದು ಸದಾನಂದರು ಹೇಳುತ್ತಿದ್ದರು. ೧೮೯೮ರಲ್ಲಿ ಕಲ್ಕತ್ತೆಯಲ್ಲಿ ಉಂಟಾದ ಪ್ಲೇಗು ಮಹಾಮಾರಿಯನ್ನು ನಿವಾರಿಸಲು ಮುಂದಾಳುವಾಗಿ ಸದಾನಂದರು "ಶಿವಜ್ಞಾನದಿಂದ ಜೀವಸೇವೆ"ಯನ್ನು ಮಾಡಿ ಕೃತಾರ್ಥರಾದರು. ಒಂದು ವಿಶೇಷವೆಂದರೆ ಅವರೇ ಪೊರಕೆ ಹಿಡಿದು ಗಲ್ಲಿಗಲ್ಲಿಗಳನ್ನು ಗುಡಿಸಿ ಶುದ್ಧಗೊಳಿಸುತ್ತಿದ್ದರು. ಜಾಡಮಾಲಿಯೂ ಕೂಡ ಅಸಹ್ಯಪಡುವ ದುರ್ವಾಸನೆಯ ಹೊಲಸುವಸ್ತುಗಳನ್ನೆಲ್ಲ ತಾವೇ ಸ್ವತಃ ಎತ್ತಿ ದೂರ ಸಾಗಿಸುತ್ತಿದ್ದರು. ಇದನ್ನು ನೋಡಿ ಜಾಡಮಾಲಿಗಳು ನಾಚಿಕೆಯಿಂದ ಮುಂದೆ ಬಂದು ಈ ಶುದ್ಧೀಕರಣದ ಕೆಲಸದಲ್ಲಿ ತೊಡಗುತ್ತಿದ್ದರು. ಎಲ್ಲಿಯಾದರೂ ಪ್ಲೇಗು ರೋಗಿಯೊಬ್ಬನು ಅಸಹಾಯಕನಾಗಿದ್ದಾನೆ ಎಂದು ತಿಳಿದು ಬಂದರೆ ಕೂಡಲೆ ಅವರು ಅಲ್ಲಿಗೆ ಧಾವಿಸಿ ಅವನ ಹಾಸಿಗೆಯ ಪಕ್ಕದಲ್ಲಿ ಕುಳಿತು ಅವನ ಸೇವೆ ಮಾಡುತ್ತಿದ್ದರು. ೧೯೦೫ರಲ್ಲಿ ಭಾಗಲ್‌ಪುರದಲ್ಲಿ ಉಂಟಾದ ಪ್ಲೇಗ್ ಮಹಾಮಾರಿಯ ನಿವಾರಣೆಗಾಗಿಯೂ ಅವರು ಶ್ರಮಿಸಿದರು. ಕುಷ್ಠರೋಗಿಗಳಲ್ಲೂ ನಾರಾಯಣನನ್ನೇ ಕಾಣುವ ಅನುಷ್ಠಾನ ವೇದಾಂತ ಅವರದಾಗಿತ್ತು.

೧೯೦೨ರಲ್ಲಿ ವಿವೇಕಾನಂದರು ಮಹಾಸಮಾಧಿಮಗ್ನರಾದಾಗ ಸ್ವಾಮಿ ಸದಾನಂದರು ಮಠದಲ್ಲೇ ಇದ್ದರು. ಸದಾನಂದರು ತಮ್ಮ ಜೀವನದ ಎಲ್ಲಾ ಶುಭಕಾಮನೆಗಳ, ಆಕಾಂಕ್ಷೆಗಳ ಅಂತಿಮವಾಯಿತೆಂದೂ ತಮ್ಮ ಸಾಧನೆ ಸಿದ್ಧಿಯ ಎಲ್ಲಾ ದ್ವಾರಗಳೂ ಮುಚ್ಚಿತೆಂದೂ ಭಾವಿಸಿದರು. ಉರಿಯುತ್ತಿದ್ದ ಚಿತಾಗ್ನಿಯನ್ನು ಕಣ್ಣುರೆಪ್ಪೆ ಅಲ್ಲಾಡಿಸದೆ ನೋಡುತ್ತಾ ಮೌನವಾಗಿ ನಾನಾ ಭಾವತರಂಗದಲ್ಲಿ ಮುಳುಗಿದರು. ಹಾತರಾಸಿನಿಂದ ಹಿಡಿದು ಬೇಲೂರು ಮಠದವರೆಗೆ ದೀರ್ಘವಾದ ೧೪ ವರ್ಷಗಳ ನೆನಪಿನ ದೋಣಿಯಲ್ಲಿ ಓಡಾಡಿದರು. ಶ್ರೀಗುರುವನ್ನು ಸ್ಮರಿಸುತ್ತ, ಹೃದಯಕಂದರದಲ್ಲಿ ಅವರ ಕಂಠಸ್ವರವನ್ನು ಕೇಳುತ್ತ ಗಂಗಾತೀರದಲ್ಲಿ ಕುಳಿತು ಕಣ್ಣೀರ ಕೋಡಿ ಹರಿಸಿದರು. ಮಾತಾಪಿತೃಗಳನ್ನು ಕಳೆದುಕೊಂಡ ಬಾಲಕನಂತೆ ಸದಾನಂದರು ಈ ರೀತಿ ಹೇಳುತ್ತಿದ್ದರು, "ನಾನು ಸ್ವಾಮೀಜಿಯವರ ಸೇವೆಗಾಗಿಯೇ ಜನ್ಮತಾಳಿದ್ದೇನೆ! ಅವರು ಹೊರಟುಹೋದರು. ಇನ್ನು ಶರೀರವಿಟ್ಟುಕೊಳ್ಳುವ ಆಸೆ ನನಗಿಲ್ಲ" ಎಂದು. ಸ್ವಾಮೀಜಿಯವರ ಅಭಯವಾಣಿ ಅವರ ಅಂತಃಕರಣದಲ್ಲಿ ಇನ್ನೂ ಅನುರಣಿತವಾಗುತ್ತಿತ್ತು: ಸ್ವಾಮಿ ಪ್ರೇಮಾನಂದರಿಗೆ ಸ್ವಾಮೀಜಿ ಒಮ್ಮೆ ಹೇಳಿದ್ದರು : "ಬಾಬೂರಾಮ್, ನನ್ನ ಶಿಷ್ಯರು ಒಂದು ವೇಳೆ ಸಾವಿರ ಬಾರಿ ನರಕಕ್ಕೆ ಹೋದರೂ ನಾನು ಸಾವಿರ ಬಾರಿ ಅವರನ್ನು ಕೈಹಿಡಿದು ಮೇಲೆತ್ತುತ್ತೇನೆ."

ನಿವೇದಿತಾ ಸ್ವಾಮಿ ವಿವೇಕಾನಂದರ ಮಹಾಸಮಾಧಿಯ ಬಳಿಕ ಮಿಸ್ ಮ್ಯಾಕ್‌ಲಾಡ್ ಅವರಿಗೆ ಬರೆದ ಪತ್ರದಲ್ಲಿ ಹೀಗೆ ಬರೆಯುತ್ತಾರೆ: "ಸದಾನಂದರಿಗೆ ತಿಳಿದಿದೆ ಅವರ ಶ್ರೀಗುರು ಸದಾ ಅವರ ಜೊತೆಯಲ್ಲೆ ಇದ್ದಾರೆ ಎಂದು, ನಾವೇನು ತಪ್ಪು ಮಾಡಿದರೂ ನಮ್ಮನ್ನು ಅವರು ಉದ್ಧಾರ ಮಾಡುತ್ತಾರೆ ಎಂದು." ೧೯೦೨ರಲ್ಲಿ ಸದಾನಂದರು ನೇಪಾಲದ ಕಡೆಗೆ ಹೊರಟರು. ಯುವಕರಿಗೆ ವಿವೇಕಾನಂದರ ವಾಣಿಯನ್ನು ಮುಟ್ಟಿಸುತ್ತ, ಅಲ್ಲಲ್ಲಿ ವೇದಾಂತ ಪ್ರಚಾರ ಮಾಡುತ್ತಾ, ಜಪ ಧ್ಯಾನಾದಿಗಳೊಂದಿಗೆ

ಕಾಲಕಳೆಯುತ್ತ ಭಾರತಪರಿಕ್ರಮಣ ಮಾಡಿದರು. ಸೋದರಿ ನಿವೇದಿತೆಯ ಎಲ್ಲ ಕಾರ್ಯಕಲಾಪಗಳಿಗೂ ಸ್ಫೂರ್ತಿದಾಯಕರಾಗಿದ್ದರು ಸದಾನಂದರು.

೧೯೦೩ರಲ್ಲಿ ನಿವೇದಿತಾ ಚಿಕ್ಕ ಮಕ್ಕಳಿಗಾಗಿ Vivekananda Home ಪ್ರತಿಷ್ಠಾಪನೆ ಮಾಡಿದರು. ಆ ಮಕ್ಕಳೆಲ್ಲ ಭಾರತ ಮಾತೆಯನ್ನು ಪ್ರೀತಿಸಬೇಕು, ಅಧ್ಯಯನದೊಂದಿಗೆ ಭಾರತ ಪರ್ಯಟನೆಯನ್ನು ಮಾಡಬೇಕೆಂಬುದು ಆಕೆಯ ಆಶಯ. ಈ ಆದರ್ಶವನ್ನು ಸಮ್ಮುಖದಲ್ಲಿರಿಸಿಕೊಂಡು ಸ್ವಾಮಿ ಸದಾನಂದರು ಒಂದು ಗುಂಪು ಬಾಲಕರನ್ನು ಕರೆದುಕೊಂಡು ಕೇದಾರ, ಬದರಿ ತೀರ್ಥದರ್ಶನಕ್ಕೆ ಹೊರಟರು. ಅದೇ ವರ್ಷ ಸದಾನಂದರು ಜಪಾನಿಗೂ ಬ್ರಹ್ಮಚಾರಿ ಅಮೂಲ್ಯರೊಂದಿಗೆ ಹೋಗಿ ಬಂದರು. ೧೯೦೪ರಲ್ಲಿ ನಿವೇದಿತಾ ಮತ್ತು ಬ್ರಹ್ಮಚಾರಿ ಅಮೂಲ್ಯರೊಂದಿಗೆ ಪ್ರಚಾರ ಕಾರ್ಯಕ್ಕಾಗಿ ಇನ್ನೊಮ್ಮೆ ಉತ್ತರಭಾರತದ ಪರ್ಯಟನೆ ಮಾಡಿದರು.

ಕ್ರಮೇಣ ಸದಾನಂದರ ಆರೋಗ್ಯ ಕ್ಷೀಣಿಸುತ್ತಾ ಬಂತು. ವಿಶ್ರಾಂತಿಯನ್ನು ಅವಶ್ಯಕವಾಗಿ ತೆಗೆದುಕೊಳ್ಳಬೇಕಾಗಿತ್ತು. ಆದರೆ ಯುವಕರು ಬಂದರೆ ಅವರಿಗೆ ಸ್ವಾಮಿ ವಿವೇಕಾನಂದರ ವಾಣಿಯನ್ನು ಸದಾನಂದರು ಮುಟ್ಟಿಸುತ್ತಿದ್ದರು. ಇದೇ ಅವರ ಜೀವನ ವ್ರತವಾಯಿತು. ಹವಾ ಬದಲಾವಣೆಗಾಗಿ ಸ್ವಲ್ಪಕಾಲ ಬಾಂಕುರಾ ಜಿಲ್ಲೆಯ ವಿಷ್ಣುಪುರದಲ್ಲಿ ಅವರನ್ನು ಇರಿಸಲಾಯಿತು. ಶ್ರೀಮಾತೆಯವರ ಶಿಷ್ಯರಾದ ಸುರೇಶಸೇನರ ಮನೆಯಲ್ಲೇ ಸದಾನಂದರು ತಂಗಿದರು. ಆದರೆ ಅವರ ಆರೋಗ್ಯ ಸುಧಾರಿಸಲಿಲ್ಲ. ಕೊನೆಗೆ ಕಲ್ಕತ್ತೆಯ ಬೋಸ್‌ಪರಾ ಲೇನಿನ ಹತ್ತಿರ ಬಾಡಿಗೆಯ ಮನೆ ಮಾಡಿ ಅಲ್ಲಿ ಅವರ ಶುಶ್ರೂಷೆಗಳಿಗೆ ವ್ಯವಸ್ಥೆ ಮಾಡಲಾಯಿತು. ಕಡೆಯ ದಿನಗಳಲ್ಲಿ ಹಾಸಿಗೆಯನ್ನು ಹಿಡಿದ ಸದಾನಂದರು ಪ್ರಕೃತಿಧರ್ಮಗಳನ್ನು ತೀರಿಸಿಕೊಳ್ಳಲು ಸಹ ಮೇಲೇಳದಾದರು. ಅತ್ಯಂತ ಕರುಣಾಜನಕವಾದ ದೃಶ್ಯ! ಮತ್ತೆ ಮತ್ತೆ ಶೌಚವಾಗುತ್ತಿದ್ದರಿಂದ ಹಾಸಿಗೆಯ ಕೆಳಗೆ ಹಾಸಿಗೆ ಒದ್ದೆಯಾಗದಿರಲಿ ಎಂದು ಹಳೆಯ ಪತ್ರಿಕೆಗಳನ್ನು ಹಾಕುತ್ತಿದ್ದರು. ಒಂದು ದಿನ ಸದಾನಂದರು ಸೇವಕರಿಗೆ ಪ್ರಶ್ನಿಸಿದರು : "ನೀವು ಯಾವ ಕಾಗದಗಳನ್ನು ನನ್ನ ಹಾಸಿಗೆಯ ಮೇಲೆ ಹಾಕುತ್ತಿರುವಿರಿ?" ಸೇವಕರು "ಹಳೆಯ ವಾರ್ತಾ ಪತ್ರಿಕೆಗಳನ್ನು" ಎಂದರು. ಆಗ ಸದಾನಂದರು "ಬೇಡಪ್ಪ, ವಾರ್ತಾ ಪತ್ರಿಕೆಗಳಲ್ಲಿ ಸರಸ್ವತೀ ದೇವಿಯಿದ್ದಾಳೆ. ಅದಲ್ಲದೆ ಇತರ ದೇವದೇವಿಯರ ವಿಚಾರವಿರುತ್ತದೆ. ಅಂತಹ ಕಾಗದಗಳನ್ನು ನನ್ನ ಶೌಚಕ್ಕೆ ಉಪಯೋಗಿಸಿದರೆ ನನಗೆ ಪಾಪ ಬರುತ್ತದೆ," ಎಂದು ದೈನ್ಯದಿಂದ ಕೇಳಿಕೊಂಡರು. ಸ್ವಲ್ಪ ಸಮಯದ ಬಳಿಕ ಸೇವಕನು, "ಸ್ವಾಮಿ, ಎಲ್ಲಾ ಕಾಗದಗಳೂ ಸರಸ್ವತಿಗೆ ಸಮಾನವೇ ಅಲ್ಲವೇ? ಹಾಗಾದರೆ ಯಾವ ಕಾಗದ ನಿಮ್ಮ ಹಾಸಿಗೆಗೆ ಹಾಸಿದರೆ ನಿಮಗೆ ಪಾಪ ಬರುವುದಿಲ್ಲವೊ ಹೇಳಿ" ಎನ್ನಲು, ಸದಾನಂದರು, "ಅಷ್ಟೊಂದು ಯೋಚಿಸುವುದೇನು, ಸ್ವಾಮಿ ವಿವೇಕಾನಂದರ ರಚನೆಗಳನ್ನು ಅಚ್ಚು ಹಾಕುವಾಗ ವ್ಯರ್ಥವಾದ ಅನೇಕ ಪೇಪರುಗಳಿಲ್ಲವೇ, ಅದನ್ನೇ ಹಾಕಿ. ಸ್ವಾಮೀಜಿ ನನ್ನ ತಾಯಿ, ನನ್ನ ತಂದೆ, ನನ್ನ ಸರ್ವಸ್ವ. ಅವರು ನನ್ನ ತಪ್ಪನ್ನೆಲ್ಲ ಕ್ಷಮಿಸುತ್ತಾರೆ. ನಾನವರ ಶಿಶು. ಅವರ ಪತ್ರಿಕೆಗಳನ್ನು ಉಪಯೋಗಿಸಿದರೆ ಯಾವ ಪಾಪವೂ ಬರುವುದಿಲ್ಲ" ಎಂದರು. ಎಂತಹ ಗುರುಪ್ರೇಮ! ತಮ್ಮ ಸೇವಕನಿಗೊಮ್ಮೆ ಅವರು ಹೇಳಿದರು: "ಸ್ವಾಮೀಜಿ, ನನ್ನ ಕಾಲನ್ನು ಮುರಿದುಬಿಟ್ಟಿದ್ದಾರೆ. ಹಾಗಿಲ್ಲದಿದ್ದಿದ್ದರೆ ನೀವು ನನ್ನ ದೇಹವನ್ನು ಮುಟ್ಟಲು ಬಿಡುತ್ತಿದ್ದೆನೆ? ನಾನು ಈ ಶರೀರದಿಂದ ಸ್ವಾಮೀಜಿಯ ಸೇವೆ ಮಾಡಿದ್ದೇನೆ. ನನ್ನ ಶರೀರ ನನಗೇ ಪೂಜ್ಯವಾಗಿದೆ."

೧೯೧೦ರಲ್ಲಿ ಶ್ರೀಮಾತೆಯವರು ಗೋಲಾಪ್‌ಮಾ, ಯೋಗಿನ್ ಮಾರೊಂದಿಗೆ ಸದಾನಂದರನ್ನು ನೋಡಲು ಬಂದರು. ನಮಸ್ಕರಿಸಿದ ಸದಾನಂದರಿಗೆ ಆಶೀರ್ವದಿಸಿ ಶ್ರೀಮಾತೆಯವರು ಹೇಳಿದರು : "ಭಯವೇಕೆ, ಮಗು, ಶ್ರೀರಾಮಕೃಷ್ಣರು ನಿನ್ನನ್ನು ಎತ್ತಿಕೊಳ್ಳಲು ಕೈಚಾಚಿದ್ದಾರೆ." ಶ್ರೀಮಾತೆಯವರ ಮಾತಿನಿಂದ ಸದಾನಂದರು ಸಮಾಧಾನಗೊಂಡರು. ಸೋದರಿ ನಿವೇದಿತಾ ಅವರನ್ನು ನೋಡುವುದಕ್ಕೆ ಬಂದಿದ್ದಾಗ ತುಂಬ ಮರುಕದಿಂದ ಕೇಳಿದರು, "ನಿಮಗೆ ತುಂಬ ವೇದನೆಯಾಗುತ್ತಿರಬಹುದಲ್ಲವೆ?" ಸದಾನಂದರು ಹೇಳಿದರು: "ಇಲ್ಲ, ನಾನು ದೇಹದಿಂದ ಪ್ರತ್ಯೇಕವಾಗಿದ್ದೇನೆ. ಅದು ಕಷ್ಟ ಅನುಭವಿಸುತ್ತಿರುವುದನ್ನು ನೋಡುತ್ತಿದ್ದೇನೆ."

೧೯೧೧ರ ಫೆಬ್ರುವರಿ ೧೮ ಅಪರಾಹ್ನ ೩ ಗಂಟೆಯ ಸಮಯದಲ್ಲಿ ಮರಣಯಾತನೆ ಪಡುತ್ತಿದ್ದ ಸದಾನಂದರು ಕಣ್ಣು ತೆರೆದು ಗೋಡೆಗೆ ತಗಲು ಹಾಕಿದ್ದ ಸ್ವಾಮಿ ವಿವೇಕಾನಂದರ ಭಾವ ಚಿತ್ರವನ್ನು ನೋಡುತ್ತಾ "ಸ್ವಾಮೀಜಿ, ಸ್ವಾಮೀಜಿ, ಸ್ವಾಮೀಜಿ" ಎಂದು ಮೂರು ಬಾರಿ ಕರೆದು ಮಂದಸ್ಮಿತವದನರಾಗಿ ತಮ್ಮ ಶ್ರೀಗುರುವನ್ನು ಅರಸುತ್ತಾ ಹೊರಟುಹೋದರು.

ಮೃದುಮಧುರ ಸ್ವಭಾವ, ಪುರುಷಕಾರ, ಗುರುಭಕ್ತಿ, ಕಾರ್ಯನಿಷ್ಠೆ ಮುಂತಾದ ದಿವ್ಯಗುಣಗಳಿಂದ ಅರಳಿದ ಆತ್ಮಪದ್ಮವೊಂದು ಸ್ವಾಮಿ ವಿವೇಕಾನಂದರ ಶ್ರೀಚರಣಗಳನ್ನು ಅಲಂಕರಿಸಿತು. ✤

ಸ್ವಾಮಿ ವಿವೇಕಾನಂದರು ಒಮ್ಮೆ ತಮ್ಮ ಮುಂದೆ ನೆರೆದಿದ್ದ ಶಿಷ್ಯರನ್ನು ಉದ್ದೇಶಿಸಿ ಕೇಳಿದರು, "ನನಗಿಂತ ಶ್ರೇಷ್ಠ ವ್ಯಕ್ತಿಯೊಬ್ಬನು ನಿಮಗೆ ಸಿಕ್ಕಿದರೆ ನನ್ನನ್ನು ಬಿಟ್ಟುಬಿಡುತ್ತೀರಾ?" ಎಂದು. ಎಲ್ಲರೂ ಉತ್ತೇಜನದಿಂದ "ಖಂಡಿತ ಇಲ್ಲ. ನಾವು ಹಾಗೆ ಮಾಡಲು ಸಾಧ್ಯವೇ ಇಲ್ಲ" ಎಂದು ಹೇಳಿದರು. ಆಗ ಸ್ವಾಮೀಜಿ ಸದಾನಂದರನ್ನು "ನೀನು ಏನು ಹೇಳುತ್ತಿ?" ಎಂದು ಕೇಳಿದರು. ಅವರು ಸ್ವಲ್ಪವೂ ಹಿಂದೆ ಮುಂದೆ ನೋಡದೆ ಹೇಳಿದರು: "ಹೌದು, ನಾನು ಬಿಟ್ಟುಬಿಡುತ್ತೇನೆ. ನಿಮಗಿಂತಲೂ ಶ್ರೇಷ್ಠ ವ್ಯಕ್ತಿ ಎಂದು ಸಿಕ್ಕುತ್ತಾನೊ ಅಂದೇ ನಿಮ್ಮನ್ನು ಬಿಟ್ಟುಬಿಡುತ್ತೇನೆ." ಸದಾನಂದರ ಈ ಉಕ್ತಿಯಲ್ಲಿ ಗುರುಭಕ್ತಿಯ ಪರಮಾವಧಿಯನ್ನು ಕಾಣುತ್ತೇವೆ. ಅವರಿಗೆ ಗೊತ್ತು ಸ್ವಾಮೀಜಿಗಿಂತ ಶ್ರೇಷ್ಠ ವ್ಯಕ್ತಿ ಇರಲು ಸಾಧ್ಯವೇ ಇಲ್ಲವೆಂದು.